**ಸಾಕ್ಷಿಯನ್ನು ದಿಃ 11.02.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ.ಎ.ಎಂ.ಆರ್., ವಕೀಲರಿಂದಃ**

ನಾನು ಎಸ್.ಜಿ.ಕೋಟೆಯಲ್ಲಿ ವಾಸವಾಗಿದ್ದೇನೆ. ನಾನು ವೃತ್ತಿಯಲ್ಲಿ ಕೃಷಿಕ. ನಾನು ಎಸ್.ಜಿ.ಕೋಟೆ ಗ್ರಾಮ ಲೆಕ್ಕಾಧಿಕಾರಿಗೆ ಸಹಾಯಕನಾಗಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 2015 ರಿಂದ 2020 ರವರೆಗೆ ಎಸ್.ಜಿ.ಕೋಟೆಯ ಪಂಚಾಯಿತಿ ಸದಸ್ಯನಾಗಿದ್ದೆ. ನನಗೆ ಗ್ರಾಮ ಪಂಚಾಯಿತಿಯಲ್ಲಿ ಖಾತೆ ಮಾಡಲು ಅರಿವು ಇದೆ. ಗ್ರಾಮ ಪಂಚಾಯಿತಿ ಖಾತೆ ಮಾಡುವ ಸಮಯದಲ್ಲಿ ಕ್ರಯ ಪತ್ರ ಅಥವಾ ದಾನಪತ್ರ , ಪಿತ್ರಾರ್ಜಿತ ಆಸ್ತಿಗಳ ಆಧಾರದ ಮೇಲೆ ಖಾತೆ ವರ್ಗಾವಣೆ ಮಾಡುತ್ತಾರೆ ಎಂದರೆ ಸರಿ.

ನಾನು ನೋಡಿದ ಹಾಗೇ ನಮ್ಮ ಗ್ರಾಮದಲ್ಲಿ ಕಲ್ಲಿನ ಕೋಟೆ ಇರುವುದಿಲ್ಲ. ನಮ್ಮ ಗ್ರಾಮದಲ್ಲಿ ಕೋಟೆ ಎನ್ನುವ ಜಾಗ ಇದೆ. ಸದರಿ ಜಾಗವನ್ನು ನಮ್ಮ ಊರಿನ ಗೌಡರು ವಿವಿಧ ವ್ಯಕ್ತಿಗಳಿಗೆ ಮಾರಾಟ ಮಾಡಿದ್ದಾರೆ. ಪ್ರಸ್ತುತವಾಗಿ ಯಾವುದೇ ಕೋಟೆಯಾಗಲೀ ಮತ್ತು ಗೋಡೆಯಾಗಲೀ ಇರುವುದಿಲ್ಲ.

ವಾದಿ ಹಾಜರುಪಡಿಸಿರುವ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಸೋಮಪ್ಪನಿಗೆ ಆದ ಕ್ರಯ ಪತ್ರವನ್ನು ನಾನು ನೋಡಿದ್ದೇನೆ. ಸಾಕ್ಷಿಗೆ ನಿಪಿ.15 ನ್ನು ತೋರಿಸಿದ್ದು , ಸದರಿ ಕ್ರಯ ಪತ್ರದಲ್ಲಿ ಸೋಮಪ್ಪನ ಹೆಸರಿಗೆ 39 ಅಡಿ X 58 ವರೆ ಅಡಿ ಜಾಗವಿರುತ್ತದೆ. ನಿಪಿ.15 ರಲ್ಲಿ ದಿಃ 09.10.1975 ರ ಕ್ರಯ ಪತ್ರದ ಉಲ್ಲೇಖವಿದೆ ಎಂದರೆ ಸರಿ. ನಾನು ದಿಃ 09.10.1975 ರ ಕ್ರಯ ಪತ್ರವನ್ನು ನೋಡಿಲ್ಲ. ದಿಃ 09.10.1975 ರ ಕ್ರಯ ಪತ್ರದಲ್ಲಿ 33 X 39 ಅಡಿ ಆಸ್ತಿಯನ್ನು ವೆಂಕಟಮುನಿಯಪ್ಪ ನವರು ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಪಿ.15 ರಂತೆ ಸೋಮಪ್ಪನ ಹೆಸರಿಗೆ ಖಾತೆಯಾಗಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಕ್ರಯ ಪತ್ರದಲ್ಲಿ ಎಷ್ಟು ಉಲ್ಲೇಖವಿದೆಯೋ ಅಷ್ಟಕ್ಕೆ ಮಾತ್ರ ಖಾತೆ ಮಾಡುತ್ತಾರೆ ಎಂದರೆ ಸರಿ. ನಿಪಿ.15 ಕ್ಕೂ ಮತ್ತು ನಿಪಿ.14 ಕ್ಕೂ ಆಸ್ತಿಯ ವಿಸ್ತೀರ್ಣದಲ್ಲಿ ವ್ಯತ್ಯಾಸವಿದೆ ಎಂದರೆ ಸರಿ. ನಿಪಿ.15 ರಲ್ಲಿ ಪೂರ್ವ-ಪಶ್ಚಿಮ 39 ಅಡಿ ಮತ್ತು ನಿಪಿ.14 ರಲ್ಲಿ ಪೂರ್ವ-ಪಶ್ಚಿಮ 68 ಅಡಿ ಉಲ್ಲೇಖವಿದೆ ಎಂದರೆ ಸರಿ. ವೆಂಕಟಮುನಿಯಪ್ಪ

ಸೋಮಪ್ಪನಿಗೆ ಮಾರಾಟ ಮಾಡುವಾಗ ಹೆಚ್ಚುವರಿ ಜಾಗವನ್ನು ಯಾವುದೇ ಆಧಾರವಿಲ್ಲದೇ ಮಾರಾಟ ಮಾಡಿದ್ದಾನೆ ಎಂದರೆ ಸರಿ. ದಾವಾ ಸ್ವತ್ತಿನ ಖಾತೆಯನ್ನು ನನ್ನ ಅವಧಿಯಲ್ಲಿ ಮಾಡಲಾಗಿದೆ ಎಂದರೆ ಸರಿಯಲ್ಲ. ಈ ದಾವೆಯ ಎಲ್ಲಾ ಕಂದಾಯ ದಾಖಲೆಗಳನ್ನು ವಾದಿಗೆ ನಾನೇ ಸೃಷ್ಟಿ ಮಾಡಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಿಪಿ.14 ರಲ್ಲಿ ಕಾಣಿಸಿದಂತೆ ಹೆಚ್ಚುವರಿ ಜಾಗವನ್ನು ಸೋಮಪ್ಪನಿಗೆ ಹಸ್ತಾಂತರ ಮಾಡುವ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ತಿಪ್ಪೆ ಜಾಗವನ್ನು ಸೇರಿಸಿ ನಿಪಿ.14 ರಲ್ಲಿ ನಮೂದು ಮಾಡಲಾಗಿದೆ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

**ಓ ಹೇ ಕೇ ಸರಿ ಇದೆ.**

**(ಚಂದ್ರಶೇಖರ್ ಅಲಬೂರು)**
**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**
**ಬಂಗಾರಪೇಟೆ.**